ಕಾಲೇಜು ಶಿಕ್ಷಣ ಇಲಾಖೆ
ಕರ್ನಾಟಕ ಸರ್ಕಾರ
Department of Collegiate Education
Government of Karnataka

NO. 1, Unnatha Shikshana Soudha, Sheshadri Road, Bangalore - 560 001 Phone: 080 22343904, email: bngcce@kar.nic.in

ಸಂಖ್ಯೆ:ಕಾಶಿಇ/ಮಾತಂವಿ/22/ಇ-ಆಫೀಸ್/2021-22

ಕಾಲೇಜು ಶಿಕ್ಷಣ ಆಯುಕ್ತರವರ ಕಛೇರಿ,
ಬೆಂಗಳೂರು, ದಿನಾಂಕ: 24.11.2021.

## ಸುತ್ತೋಲೆ-2

ವಿಷಯ: ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗಳಲ್ಲಿ ಇ-ಆಫೀಸ್ ಉಪಕ್ರಮ ಅನುಷ್ಠಾನವಾಗಿರುವ ಬಗ್ಗೆ.

ಉಲ್ಲೇಖ:
1. ಈ ಕಛೇರಿ ಪತ್ರ ಸಂಖ್ಯೆ: ಕಾಶಿಇ ಮಾತಂವಿ 36 ಇ-ಆಫೀಸ್ 2018-19ರ ದಿನಾಂಕ: 20.07.2020
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ(ಆ.ಸು) 56 ಕತವ 2021 ಬೆಂಗಳೂರು ದಿನಾಂಕ: 15.09.2021.
3. ದಿನಾಂಕ: 22.10.2021ರ ಸಮ ಸಂಖ್ಯೆ ಸುತ್ತೋಲೆ.

******

ಉಲ್ಲೇಖ-3ರ ಸಮ ಸಂಖ್ಯೆ ಸುತ್ತೋಲೆಯಲ್ಲಿ ಈಗಾಗಲೇ ತಿಳಿಸಿರುವಂತೆ ಇ-ಆಫೀಸ್ ಅನುಷ್ಠಾನದ ಬಗ್ಗೆ ವರದಿಯನ್ನು ನೀಡುವಂತೆ ತಿಳಿಸಲಾಗಿತ್ತು. ಅದರಂತೆ ಪ್ರಾದೇಶಿಕ ಶಿವಮೊಗ್ಗ ಇವರು ತಾಂತ್ರಿಕ ಕಾರಣವನ್ನು ನೀಡಿದ್ದು, ನವೆಂಬರ್-2021ರಿಂದ ಇ-ಆಫೀಸ್ ಅನುಷ್ಠಾನಮಾಡಲಾಗುವುದು ಮತ್ತು ಕಲಬುರಗಿ ಜಂಟಿ ನಿರ್ದೇಶಕರ ಕಛೇರಿ ಇವರು KSWAN CONNECTION ವ್ಯವಸ್ಥೆಯನ್ನು ಕಲ್ಪಿಸಿಕೊಂಡು ನಂತರದಲ್ಲಿ ಅನುಷ್ಠಾನ ಮಾಡುವುದಾಗಿ ತಿಳಿಸಿರುತ್ತಾರೆ ಆದರೆ ಇದುವರೆವಿಗೆ ಅನುಷ್ಠಾನಗೊಳಿಸಿರುವುದಿಲ್ಲ.

ಉಳಿದ ಜಂಟಿ ನಿರ್ದೇಶಕರ ಕಛೇರಿಗಳಿಂದ ಇ-ಆಫೀಸ್ ಅನುಷ್ಠಾನದ ಕುರಿತಂತೆ ಇದುವರೆವಿಗೂ ಯಾವುದೇ ಪ್ರತ್ಯುತ್ತರ ಬಂದಿರುವುದಿಲ್ಲ. ಇ-ಆಫೀಸ್ ಅನುಷ್ಠಾನವನ್ನು ಗಂಭೀರವಾಗಿ ಪರಿಗಣಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಇ-ಆಫೀಸ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಿ ಕೇಂದ್ರ ಕಛೇರಿಗೆ ವರದಿಯನ್ನು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಪ್ರಾದೇಶಿಕ ಜಂಟಿ ನಿರ್ದೇಶಕರುಗಳು ಮತ್ತು ಇ-ಆಫೀಸ್ ನೋಡಲ್ ಅಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು. ದಿನಾಂಕ: 01.12.2021ರೊಳಗಾಗಿ ಇ-ಆಫೀಸ್ ಅನುಷ್ಠಾನಕ್ಕೆ ಅಗತ್ಯವಾದ ಎಲ್ಲಾ ವ್ಯವಸ್ಥೆಗಳನ್ನು ಪೂರೈಸಿಕೊಂಡು ಎಲ್ಲಾ ಜಂಟಿ ನಿರ್ದೇಶಕರ ಕಛೇರಿಗಳು ಕೇಂದ್ರ ಕಛೇರಿಯೊಂದಿಗೆ ಇ-ಆಫೀಸ್ ಮುಖಾಂತರವೇ ಪತ್ರ/ಕಡತ ವ್ಯವಹರಿಸತಕ್ಕದೆಂದು ಕಟ್ಟುನಿಟ್ಟಿನ ಸೂಚನೆಯನ್ನು ನೀಡಲಾಗಿದೆ. ಸದರಿ ದಿನಾಂಕದ ನಂತರದಲ್ಲಿ ಪ್ರಾದೇಶಿಕ ಕಛೇರಿಗಳಿಂದ ಭೌತಿಕ ಪತ್ರ/ಕಡತಗಳನ್ನು ಸ್ವೀಕರಿಸಲಾಗುವುದಿಲ್ಲ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ,

1. ಜಂಟಿ ನಿರ್ದೇಶಕರು, ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ & ಕಲಬುರಗಿ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ
2. ಕಛೇರಿ ಪ್ರತಿ